# ಕರ್ತನಿಗೆ ನಾನು ಏನನ್ನು ಕೊಡಲಿ?

*ಯು.ಎಸ್.ದಲ್ಲಿ ನವಂಬರಿನಲ್ಲಿ ಕೃತಜ್ಞತಾಸ್ತುತಿಯ ವಿಶೇಷ ದಿನವು ಆಚರಿಸಲ್ಪಡುವುದು. ಕೃತಜ್ಞತಾಸ್ತುತಿಯ ಬಗ್ಗೆ - ವಿಶೇಷವಾಗಿ ಕರ್ತನಿಗೆ ಉಪಕಾರಸ್ತುತಿ ಮಾಡುವದರ ಪಾಠಗಳು ಯಾವಾಗಲೂ ಮೆಚ್ಚಿಕೊಳ್ಳಲ್ಪಡುತ್ತವೆ.*

ಆಸ್ಟ್ರೇಲಿಯದ ಸಿಡ್ನಿಯ ಕೇಂದ್ರದಲ್ಲಿ, ಬಂದರಿನಿಂದ ಅನತಿ ದೂರದಲ್ಲಿ ಎತ್ತರವಾದ ಕಟ್ಟಡಗಳ ಮಧ್ಯದಲ್ಲಿ, ಇಂಗ್ಲೀಷ್ ವಲಸೆಗಾರರಿಂದ ಮೊದಲನೆಯ ಧಾರ್ಮಿಕ ಆರಾಧನೆಯು ನಡಿಸಲ್ಪಟ್ಟಿದ್ದನ್ನು ಜ್ಞಾಪಿಸುವ ಆಕರ್ಷಕವಾದ ಸ್ಮಾರಕವು ಇರುತ್ತದೆ.

ಈ ನೋಟವನ್ನು ನಿಮ್ಮ ಮನಸ್ಸಿನಲ್ಲಿ ಚಿತ್ರಿಸಿಕೊಳ್ಳಿರಿ: ಪ್ರಥಮ ಹಡಗು ತುಂಬ ನೆಲೆಸಲು ಬಂದ ಜನರು - ಹೆಚ್ಚಾದವರು ಶಿಕ್ಷೆಹೊಂದಿದವರು ಮತ್ತು ಗುಲಾಮರು - ಈ ಸಿಡ್ನಿ ಬಂದರು ಎಂದಾಗಿರುವದರಲ್ಲಿ 1788 ಜನವರಿ 26ರಂದು ತಲುಪಿದರು. ಒಂದು ಕಾಲಗಿಯು ಏರ್ಪಟ್ಟಿತು. ಪೆಬ್ರುವರಿ 3ರಂದು ಅವರು ಒಳ ಪ್ರದೇಶದಲ್ಲಿ ಹೋಗಿ ಅವಸರದಲ್ಲಿ ಒಂದು ಆಶ್ರಯವನ್ನು ಕಟ್ಟಿಕೊಂಡರು. ಪ್ರಯಾಣದಲ್ಲಿ ಅನೇಕರು ಸತ್ತು ಹೋಗಿದ್ದರು; ಉಳಿದವರಿಗೆ ಸ್ವಲ್ಪ ಸ್ವಾಸ್ಥ್ಯಗಳು ಇಲ್ಲವೇ ಯಾವ ಸ್ವಾಸ್ಥ್ಯಗಳು ಇರಲಿಲ್ಲ. ಅವರಿಗೆ ಇದ್ದದ್ದು ಕಾಡು ಜನರಿದ್ದ ಅರಣ್ಯ.

ನೇಮಿಸಿದ ಸಮಯದಲ್ಲಿ, ಚಾಪ್ಲೇನರಾದ ರಿಚರ್ಡ್ ಜಾನ್ಸನ್, ಮಾತಾಡಲು ಎದ್ದು ನಿಂತನು. ಆ ಸಂದರ್ಭಕ್ಕೆ ಯೋಗ್ಯವಾದ ವಚನವು ಯಾವುದಾಗಿತ್ತು? "ಕಿಡಿಗಳು ಮೇಲಕ್ಕೆ ಹಾರುವದೂ ಮನುಷ್ಯರು ಶ್ರಮೆಯನ್ನು ಅನುಭವಿಸುವದೂ ಸಹಜ ..." (ಯೋಬ 5:7) ಎಂಬುದಿದ್ದರೆ ಹೇಗೆ? ಕೀರ್ತನೆ 13:1 ಯೋಗ್ಯವೆಂದು ತೋರುತ್ತದೆ: "ಯೆಹೋವನೇ, ನೀನು ಇನ್ನೆಷ್ಟರವರೆಗೆ ನನ್ನನ್ನು ಸಂಪೂರ್ಣವಾಗಿ ಮರೆತಿರುವೆ? ಇನ್ನೆಲ್ಲಿಯ ತನಕ ನನಗೆ ವಿಮುಖನಾಗಿರುವಿ?" ಇಂಥ ವಾಕ್ಯಭಾಗಗಳನ್ನು ಜಾನ್ಸನ್ ಆಯ್ದುಕೊಳ್ಳಲಿಲ್ಲ. ಅವನಾಯ್ದುಕೊಂಡ ವಾಕ್ಯಭಾಗ ಕೀರ್ತನೆ 116:12: "ಯೆಹೋವನ ಮಹೋಪಕಾರಗಳಿಗೆ ಬದಲೇನು ಮಾಡಲಿ?" ಎಂಬುದಾಗಿತ್ತು. ಈ ಜನರಲ್ಲಿ ಏನೂ ಇರಲಿಲ್ಲ, ಆದರೆ ಅವರು ಜೀವಿತರೂ ಸ್ವತಂತ್ರರೂ ಆಗಿದ್ದರು ಮತ್ತು ಭವಿಷ್ಯಕ್ಕಾಗಿ ವಾಗ್ದಾನವಿತ್ತು. ಅವರು ತಮಗಿದ್ದದ್ದರ ಬಗ್ಗೆ ಕೃತಜ್ಞತೆಯುಳ್ಳವರಾಗಿದ್ದರು.

ಬಹಳ-ದಿನಗಳ ಹಿಂದಿನ ಆ ಕೂಡಿಬರುವಿಕೆಯಿಂದ ನಿಮ್ಮ ನೋಟವನ್ನು ಇಂದಿನ ಆರಾಧನೆಯ ಕಡೆಗೆ ತಿರುಗಿಸಿರಿ. ನಾವು ಕ್ರಿಸ್ತನಲ್ಲಿಯ ಸಹೋದರ, ಸಹೋದರಿಯರ ಸ್ನೇಹಿತರ ಮತ್ತು ಪ್ರಿಯವಾದವರ ಮಧ್ಯದಲ್ಲಿ ನಾವಿದ್ದೇವೆ. ನಾವು ಗುಲಾಮರಲ್ಲ, ಆದರೆ ಸ್ವತಂತ್ರ ಜನರಾಗಿದ್ದೇವೆ; ನಮ್ಮಲ್ಲಿ ಹೆಚ್ಚಾದವರು ರಾಜಕೀಯವಾಗಿ ಸ್ವತಂತ್ರರಾಗಿದ್ದೇವೆ, ಆದರೆ ಕ್ರೈಸ್ತರಾದವರೆಲ್ಲರೂ ಆತ್ಮಿಕವಾಗಿ ಸ್ವತಂತ್ರರಾಗಿದ್ದಾರೆ ನಾವು ಕರ್ತನಿಂದ ವಿಫುಲವಾಗಿ ಆಶೀರ್ವದಿಸಲ್ಪಟ್ಟಿದ್ದೇವೆ. ಆದುದರಿಂದ, ನಾವು "[ನಮ್ಮ] ಕಡೆಗಿರುವ ಕರ್ತನ ಎಲ್ಲಾ ಮಹೋಪಕಾರಗಳಿಗಾಗಿ [ನಾವು] ಬದಲೇನು ಕೊಡೋಣ?" ಎಂದು ಕೇಳುವುದು ಹೆಚ್ಚು ಯೋಗ್ಯವಾಗಿದೆ.

## ನಮ್ಮ ಕಡೆಗಿರುವ ಆತನ ಎಲ್ಲಾ ಉಪಕಾರಗಳು

"ನಮ್ಮ ಕಡೆಗಿರುವ ಎಲ್ಲಾ ಉಪಕಾರಗಳನ್ನು" ಗಮನಿಸುವದರಿಂದ ನಾವು ಪ್ರಾರಂಭಿಸೋಣ. ಕಾಲಕಾಲಕ್ಕೆ, ನಾವು [ನಮ್ಮ] ಆಶೀರ್ವಾದಗಳನ್ನು ಎಣಿಸುವ ಅಗತ್ಯತೆಯಿರುತ್ತದೆ.

### ಆತನ ಆತ್ಮಿಕ ಉಪಕಾರಗಳು

ಪ್ರಥಮವಾದವುಗಳು ಮತ್ತು ಶ್ರೇಷ್ಠವಾದವುಗಳು ನಮ್ಮ ಕಡೆಗಿರುವ ಆತನ ಆತ್ಮಿಕ ಉಪಕಾರಗಳು "ನಮ್ಮ ಕರ್ತನಾದ ಯೇಸು ಕ್ರಿಸ್ತನ ದೇವರೂ ತಂದೆಯೂ ಆಗಿರುವಾತನಿಗೆ ಸ್ತೋತ್ರ. ಆತನು ಪರಲೋಕದಲ್ಲಿನ ಸಕಲ ಆತ್ಮೀಯ ವರಗಳನ್ನು ನಮಗೆ ಕ್ರಿಸ್ತ ಯೇಸುವಿನಲ್ಲಿ ಅನುಗ್ರಹಿಸಿದ್ದಾನೆ" (ಎಫೆಸ 1:3).

ಅತೀ ದೊಡ್ಡ ಆತ್ಮಿಕ ವರವು *ಆತನ ಕುಮಾರನ* ದಾನವಾಗಿದೆ. "ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನು ಇಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು; ಆತನನ್ನು ನಂಬುವ ಒಬ್ಬನಾದರೂ ನಾಶವಾಗದೆ ಎಲ್ಲರೂ ನಿತ್ಯಜೀವವನ್ನು ಪಡೆಯಬೇಕೆಂದು ಆತನನ್ನು ಕೊಟ್ಟನು" (ಯೋಹಾನ 3:16). ನನಗೆ ಮೂವರು ಹೆಣ್ಣು ಮಕ್ಕಳಿದ್ದಾರೆ, ಆದರೆ ಮಾನವ ಜನಾಂಗಕ್ಕಾಗಿ ಅವರಲ್ಲಿ ಒಬ್ಬರನ್ನೂ ಕೊಡಲು ನಾನು ಬಯಸುವದಿಲ್ಲ. ದೇವರಿಗೆ ಒಬ್ಬನೇ ಕುಮಾರನಿದ್ದನು, ಮತ್ತು ಆತನು ನಮಗಾಗಿ ಆತನನ್ನು ಕೊಟ್ಟನು "ವರ್ಣಿಸಲಶಕ್ಯವಾದ ದೇವರ ವರಕ್ಕಾಗಿ ಆತನಿಗೆ ಸ್ತೋತ್ರ" (2 ಕೊರಿಂಥ 9:15).

ಇನ್ನೊಂದು ಭವ್ಯವಾದ ವರವು *ಬೈಬಲ್ ಆಗಿರುತ್ತದೆ.* ಬೈಬಲು ದೇವರ ಸಂಪೂರ್ಣವಾದ ಮತ್ತು ಅಂತಿಮ ಪ್ರಕಟನೆಯಾಗಿದೆ. "... ಯೇಸುವಿನ ದಿವ್ಯಶಕ್ತಿಯು ನಮಗೆ ಪರಿಜ್ಞಾನವನ್ನು ಕೊಟ್ಟದ್ದರಲ್ಲಿ ಜೀವಕ್ಕೂ ಭಕ್ತಿಗೂ ಬೇಕಾದದ್ದೆಲ್ಲವೂ ದೊರೆಯಿತೆಂದು ಬಲ್ಲೆವಷ್ಟೆ" (2 ಪೇತ್ರ 1:3). ಯಾವುದೇ ಒಳ್ಳೇ ಕಾರ್ಯದ ಆಹ್ವಾನವನ್ನು ಎದುರಿಸಲು ಬೈಬಲು ನಮ್ಮನ್ನು ಸನ್ನದ್ಧಗೊಳಿಸುತ್ತದೆ (2 ತಿಮೊಥೆ 3:17). ನಾವು ಆರಾಧಿಸುವ ಜೀವಿಗಳಾಗಿದ್ದೇವೆ ಮತ್ತು ಹೇಗೆ ಆರಾಧಿಸಬೇಕೆಂಬುದನ್ನು ಬೈಬಲ್ ನಮಗೆ ಬೋಧಿಸುತ್ತದೆ (ಯೋಹಾನ 4:24) ನಾವು ಪಾಪಭರಿತ ವ್ಯಕ್ತಿಗಳು ಮತ್ತು ನಾವು ಹೇಗೆ ರಕ್ಷಿಸಲ್ಪಡಬಹುದು ಎಂಬುದನ್ನು ಬೈಬಲ್ ನಮಗೆ ಹೇಳುತ್ತದೆ (ಮಾರ್ಕ 16:15, 16). ನಾವು ಶ್ರಮೆಪಡುತ್ತಿರುವ ಜೀವಿಗಳು, ಮತ್ತು ಬೈಬಲ್ ನಮಗೆ ದೊಡ್ಡ ವೈದ್ಯನನ್ನು ಪ್ರಕಟಿಸುತ್ತದೆ (ಮತ್ತಾಯ 9:12). ನಾವು ನಿರಾಶರಾದಾಗ, ಬೈಬಲ್ ಧೈರ್ಯದ ಸಂದೇಶವನ್ನು ಕೊಡುತ್ತದೆ. ನಾವು ಬಲಹೀನರಾದಾಗ, ಅದು ಬಲವನ್ನು ಒದಗಿಸುತ್ತದೆ. ನಾವು ಸಂತೋಷದಿಂದಿರುವಾಗ ನಮ್ಮ ಆನಂದಕ್ಕೆ ಹೆಚ್ಚಿನದನ್ನು ಕೂಡಿಸುತ್ತದೆ. ನಾವು ನಿರಾಶೆಯಲ್ಲಿರುವಾಗ, ಅದು ನಮಗೆ ನಿರೀಕ್ಷೆಯನ್ನು ಕೊಡುತ್ತದೆ. ನಾವು ಸಾಯುತ್ತಿರುವಾಗ, ದೇವರ ಕೃಪೆಯ ಮುಖಾಂತರ ನಮಗೆ ಜೀವವನ್ನು ವಾಗ್ದಾನ ಮಾಡುತ್ತದೆ.

ಅನಂತರ *ರಕ್ಷಣೆಯ* ವರವಿದೆ, ಬಹಳವಾದದ್ದನ್ನು ಒಳಗೊಂಡಿರುವ ಒಂದು ವರವಾಗಿದೆ. "ಯಾಕಂದರೆ ಪಾಪವು ಕೊಡುವ ಸಂಬಳ ಮರಣ; ದೇವರ ಉಚಿತಾರ್ಥ ವರವು ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಲ್ಲಿರುವ ನಿತ್ಯಜೀವ" (ರೋಮಾಪುರ 6:23).

ರಕ್ಷಣೆಯ ವರಕ್ಕೆ ಸಂಬಂಧಿಸಿದ್ದು *ಸಭೆಯ* ವರವಾಗಿದೆ: ಪರಲೋಕದಿಂದ ಕಳುಹಿಸಲ್ಪಟ್ಟ ಸಭೆ (ಎಫಸ 3:10, 11), ಸಭೆಯು ರಕ್ತದಿಂದ ಕೊಳ್ಳಲ್ಪಟ್ಟದ್ದು (ಅಪೊಸ್ತಲರ ಕೃತ್ಯಗಳು 20:28), ಆತ್ಮದಿಂದ ತುಂಬಲ್ಪಟ್ಟದ್ದು (ಎಫೆಸ 2:22) ಮತ್ತು

ಮಹಿಮೆ ಹೊಂದುವಂಥದ್ದು (1 ಕೊರಿಂಥ 15:23-26). ಸಭೆಯು ಒಂದು ಆತ್ಮಿಕ ಕುಟುಂಬ, ಅದರಲ್ಲಿ ದೇವರು ನಮಗೆ ನಮ್ಮ ತಂದೆಯಾಗಿರುವನು (1 ತಿಮೊಥೆ 3:15). ಇದು ರಾಜ್ಯವಾಗಿದ್ದು ಇದರ ಮೇಲೆ ಕ್ರಿಸ್ತನು ಅರಸನಂತೆ ಆಳುವನು (ಮತ್ತಾಯ 16:18, 19). ಅದು ದ್ರಾಕ್ಷೇ ತೋಟವಾಗಿದ್ದು ಅದರಲ್ಲಿ ನಾವು ಕೆಲಸ ಮಾಡುವೆವು (ಮತ್ತಾಯ 20:1). ಇದು ದೇವರ ಸೇನೆಯಾಗಿದ್ದು ಅದರಲ್ಲಿ ನಾವು ಕರ್ತನಿಗಾಗಿ ಹೋರಾಟ ಮಾಡುವೆವು (1 ತಿಮೊಥೆ 6:12). ಇದು ದೇವರ ಆಲಯವಾಗಿದ್ದು, ಅದರಲ್ಲಿ ನಾವು ಆತನನ್ನು ಆರಾಧಿಸುವೆವು (ಎಫೆಸ 2:21). ಅದು "ಸುರಕ್ಷಿತತೆಯ ನಾವೆ"[1] ಮತ್ತು "ಆಶ್ರಯ ನಗರ"[2] ಆಗಿರುವುದು, ಅಲ್ಲಿ ನಾವು ಆಶ್ರಯವನ್ನು ರಕ್ಷಣೆಯನ್ನು ಪಡೆದು ಕೊಳ್ಳುವೆವು (ನೋಡಿರಿ ಎಫೆಸ 2:16; ಅಪೊಸ್ತಲರ ಕೃತ್ಯಗಳು 20:28).

ಇದೆಲ್ಲದಕ್ಕೆ, ನಾವು "*ಆತನ ಅಮೂಲ್ಯವಾಗಿಯೂ ಉತ್ಕೃಷ್ಟವಾಗಿಯೂ ಇರುವ ವಾಗ್ದಾನಗಳ*" (2 ಪೇತ್ರ 1:4; ಒತ್ತಿ ಹೇಳಿದ್ದು ನನ್ನದು) ವರವನ್ನು ಕೂಡಿಸಬಹುದು. ಬೈಬಲಿನಲ್ಲಿ ನಿಮ್ಮ ಮೆಚ್ಚಿಗೆಯ ವರವು ಯಾವುದು? ಇಲ್ಲಿ ನನ್ನ ಕೆಲವು ವರಗಳಿವೆ:

> ಇದಲ್ಲದೆ ದೇವರ ಸಂಕಲ್ಪದ ಮೇರೆಗೆ ಕರೆಯಲ್ಪಟ್ಟು ಆತನನ್ನು ಪ್ರೀತಿಸುವವರ ಹಿತಕ್ಕಾಗಿ ಎಲ್ಲಾ ಕಾರ್ಯಗಳು ಅನುಕೂಲವಾಗುತ್ತವೆ ಎಂದು ನಮಗೆ ಗೊತ್ತದೆ (ರೋಮಾಪುರ 8:28).
>
> ಯಾವ ಸಂಬಂಧವಾಗಿಯೂ ಚಿಂತೆಮಾಡದೆ ಸರ್ವವಿಷಯದಲ್ಲಿ ದೇವರ ಮುಂದೆ ಕೃತಜ್ಞತಾಸ್ತುತಿಯನ್ನೂ ಪ್ರಾರ್ಥನೆವಿಜ್ಞಾಪನೆಗಳನ್ನೂ ಮಾಡುತ್ತಾ ನಿಮಗೆ ಬೇಕಾದದ್ದನ್ನು ತಿಳಿಯಪಡಿಸಿರಿ. ಆಗ ಎಲ್ಲಾ ಗ್ರಹಿಕೆಯನ್ನು ಮೀರುವ ದೇವ ಶಾಂತಿಯು ನಿಮ್ಮ ಹೃದಯಗಳನ್ನೂ ಯೋಚನೆಗಳನ್ನೂ ಕ್ರಿಸ್ತ ಯೇಸುವಿನಲ್ಲಿ ಕಾಯುವುದು (ಫಿಲಿಪ್ಪಿ 4:6, 7).
>
> ನಾನು ನಿನ್ನನ್ನು ಎಂದಿಗೂ ಕೈಬಿಡುವದಿಲ್ಲ, "ಎಂದಿಗೂ ತೊರೆಯುವದಿಲ್ಲವೆಂದು ದೇವರು ತಾನೇ ಹೇಳಿದ್ದಾನೆ." ಆದದರಿಂದ, "ಕರ್ತನು ನನ್ನ ಸಹಾಯಕನು, ಭಯಪಡೆನು, ಮನುಷ್ಯನು ನನಗೆ ಏನು ಮಾಡಾನು?" (ಇಬ್ರಿಯ 13:5, 6).
>
> ನಿಮ್ಮ ಚಿಂತೆಯನ್ನೆಲ್ಲಾ ಆತನ ಮೇಲೆ ಹಾಕಿರಿ, ಆತನು ನಿಮಗೋಸ್ಕರ ಚಿಂತಿಸುತ್ತಾನೆ (1 ಪೇತ್ರ 5:7).
>
> ಆದರೆ ಆತನು ಬೆಳಕಿನಲ್ಲಿರುವಂತೆಯೇ ನಾವು ಬೆಳಕಿನಲ್ಲಿ ನಡೆದರೆ ನಾವು ಒಬ್ಬರ ಸಂಗಡಲೊಬ್ಬರು ಅನ್ಯೋನ್ಯತೆಯಲ್ಲಿದ್ದೇವೆ, ಮತ್ತು ಅತನ ಮಗನಾದ ಯೇಸುವಿನ ರಕ್ತವು ಸಕಲಪಾಪವನ್ನು ನಿವಾರಣ ಮಾಡಿ ನಮ್ಮನ್ನು ಶುದ್ಧಿ ಮಾಡುತ್ತದೆ (1 ಯೋಹಾನ 1:7).

ಅಂತಿಮವಾಗಿ, *ಪರಲೋಕದ* ವರದ ಕಡೆಗೆ ಮುನ್ನೋಡೋಣ. ಆ ಅದ್ಭುತಕರ ವಾದ ಸ್ಥಳದಲ್ಲಿ ದೇವರು, "ಅವರ ಕಣ್ಣೀರನ್ನೆಲ್ಲಾ ಒರೆಸಿಬಿಡುವನು, ಇನ್ನು ಮರಣವಿರುವದಿಲ್ಲ, ಇನ್ನು ದುಃಖವಾಗಲಿ ಗೋಳಾಟವಾಗಲಿ ಕಷ್ಟವಾಗಲಿ ಇರುವದಿಲ್ಲ; ಮೊದಲಿದ್ದದ್ದೆಲ್ಲಾ ಇಲ್ಲದೆ ಹೋಯಿತು" (ಪ್ರಕಟನೆ 21:4)!

**ಆತನ ಪ್ರಾಕೃತಿಕ ಉಪಕಾರಗಳು**

ದೇವರ ಆತ್ಮಿಕ ಒದಗಿಸುವಿಕೆಗಳು ಆಶ್ಚರ್ಯಕರವಾದವುಗಳಾಗಿವೆ. ಹಾಗಿದ್ದರೂ ನಮಗಾಗಿರುವ ಆತನ ಪ್ರಾಕೃತಿಕ ಉಪಕಾರಗಳನ್ನು ಕಡೆಗಣಿಸಬಾರದು.

ಆತನು ನಮಗೆ *ಕುಟುಂಬಗಳನ್ನು* ಕೊಟ್ಟಿದ್ದಾನೆ: ನಮ್ಮ ಜೊತೆಗಾರರನ್ನು ಮತ್ತು ನಮ್ಮ ಮಕ್ಕಳನ್ನು ಕೊಟ್ಟಿದ್ದಾನೆ. "ಗುಣವತಿಯಾದ ಸತಿಯು ಎಲ್ಲಿ ಸಿಕ್ಕಾಳು? ಆಕೆಯು ಹವಳಕ್ಕಿಂತಲೂ ಬಹು ಅಮೂಲ್ಯಳು" (ಜ್ಞಾನೋಕ್ತಿ 31:10). "... ವಿವೇಕಿನಿಯಾದ ಹೆಂಡತಿಯು ಯೆಹೋವನ ಅನುಗ್ರಹವೇ" (ಜ್ಞಾನೋಕ್ತಿ 19:14). "ಪುತ್ರ ಸಂತಾನವು ಯೆಹೋವನಿಂದ ಬಂದ ಸ್ವಾಸ್ತ್ಯವು; ಗರ್ಭಫಲವು ಆತನ ಬಹುಮಾನವೇ" (ಕೀರ್ತನೆ 127:3). ಕ್ರೈಸ್ತ ಮನೆಯು ಹೂವು, ಪರಲೋಕವು ಅದರ ಫಲ ಎಂದು ಯಾರೋ ಹೇಳಿದ್ದಾರೆ.

ದೇವರು ನಮಗೆ *ಜೀವನದ ಅಗತ್ಯತೆಗಳನ್ನು* ಕೊಡುವನು. ಪರ್ವತ ಪ್ರಸಂಗದಲ್ಲಿ ದೇವರು ನಮಗೆ "ನಮ್ಮ ಅನುದಿನದ ಆಹಾರವನ್ನು" ಕೊಡುವನೆಂದು ಯೇಸು ಒತ್ತಿ ಹೇಳಿದನು (ಮತ್ತಾಯ 6:11). ಆತನು "ಆಕಾಶದಲ್ಲಿ ಹಾರಾಡುವ ಪಕ್ಷಿಗಳಿಗೂ" ನಮಗೂ ಒದಗಿಸುವನು (ಮತ್ತಾಯ 6:26). ನಾವು "ಮೊದಲು ದೇವರ ರಾಜ್ಯಕ್ಕಾಗಿಯೂ ಆತನ ನೀತಿಗಾಗಿಯೂ" ಹುಡುಕಿದರೆ ಜೀವನದ ಅವಶ್ಯಕತೆಗಳು ನಮ್ಮವುಗಳಾಗುವವೆಂದು ಯೇಸು ವಾಗ್ದಾನ ಮಾಡಿದನು (ಮತ್ತಾಯ 6:33).[3]

ಇದಲ್ಲದೆ, ದೇವರು ನಮಗೆ ನಮ್ಮ *ದೇಹಗಳನ್ನು* ಮತ್ತು ಆರೋಗ್ಯವನ್ನು ಕೊಟ್ಟಿದ್ದಾನೆ. ದಾವೀದನು ಹೇಳಿದಂತೆ, ನಾವು "ಅದ್ಭುತವಾಗಿಯೂ ವಿಚಿತ್ರವಾಗಿಯೂ ರಚಿಸಲ್ಪಟ್ಟಿದ್ದೇವೆ" (ಕೀರ್ತನೆ 139:14).

ಆ ಮೇಲೆ, *ಸಮಾಧಾನದ ಮತ್ತು ಸ್ವಾತಂತ್ರ್ಯದ* ದೇವರ ಒದಗಿಸುವಿಕೆಯಿಂದ. 1 ತಿಮೊಥೆ 2:1, 2ರಲ್ಲಿ "ಮನುಷ್ಯರೆಲ್ಲರಿಗೋಸ್ಕರ ... ಅಧಿಕಾರಿಗಳಿಗಾಗಿ" ಪ್ರಾರ್ಥನೆ ಮಾಡಬೇಕು. ಅದರಿಂದ "ನಮಗೆ ಸುಖಸಮಾಧಾನಗಳು ಉಂಟಾಗಿ ನಾವು ಪೂರ್ಣ ಭಕ್ತಿಯಿಂದಲೂ ಗೌರವದಿಂದಲೂ ಕಾಲಕ್ಷೇಪ ಮಾಡುವೆವು" ಎಂದು ಹೇಳಲ್ಪಟ್ಟಿದೆ. ಜಗತ್ತಿನ ಅನೇಕ ಭಾಗಗಳಲ್ಲಿ ಕ್ರೈಸ್ತರು ಅದ್ಭುತವಾದ ರಾಜಕೀಯ ಆಶೀರ್ವಾದಗಳನ್ನು ಅನುಭವಿಸುತ್ತಿರುವರು ಮತ್ತು ಹೀಗೆ ಪ್ರತೀವಾರ ದೇವರನ್ನು ಆರಾಧಿಸಲು ಕೂಡಿಬರಲು ಶಕ್ತರಾಗಿರುವರು.

*ಸೌಂದರ್ಯದ,* ದೇವರ ಒದಗಿಸುವಿಕೆಯನ್ನು ನಾವು ಮರೆಯಲು ಬಯಸುವದಿಲ್ಲ. ನಾವು ಸೌಂದರ್ಯದಿಂದ ಸುತ್ತುವರಿಸಲ್ಪಟ್ಟಿದ್ದೇವೆ: ಸೂರ್ಯ, ಚಂದ್ರ ಮತ್ತು ನಕ್ಷತ್ರಗಳು; ಕಾಲಮಾನಗಳ ಅದ್ಭುತಗಳು; ಮರಗಳು ಮತ್ತು ಹೂವುಗಳು; ಪಕ್ಷಿಗಳು ಮತ್ತು ಪ್ರಾಣಿಗಳು. "... ಭೂಮ್ಯಾಕಾಶಗಳನ್ನೂ ಸಮುದ್ರವನ್ನೂ ಅವುಗಳಲ್ಲಿರುವ ಸಮಸ್ತವನ್ನೂ ನಿರ್ಮಾಣ ಮಾಡಿದ ಜೀವಸ್ವರೂಪನಾದ ದೇವರ ಕಡೆಗೆ ... ಆತನು ತನ್ನ ವಿಷಯದಲ್ಲಿ ಸಾಕ್ಷಿಕೊಡದೆ ಇರಲಿಲ್ಲ; ನಿಮಗೆ ಆಕಾಶದಿಂದ ಮಳೆಯನ್ನೂ ಸುಗ್ಗೀಕಾಲಗಳನ್ನೂ ದಯಪಾಲಿಸಿದನು ..." (ಅಪೊಸ್ತಲರ ಕೃತ್ಯಗಳು 14:15-17) ಎಂದು ಪೌಲನು ಹೇಳಿದನು.

## ಹಾಗಾದರೆ, ಕರ್ತನಿಗೆ ನಾವು ಏನನ್ನು ಕೊಡೋಣ?

"[ನಮಗಿರುವ] ಕರ್ತನ ಎಲ್ಲಾ ಉಪಕಾರಗಳಿಗೆ ಬದಲಾಗಿ ಆತನಿಗೆ [ನಾವು] ಏನು ಕೊಡೋಣ?" ಎಂದು ನಮ್ಮ ಕೃತಜ್ಞತೆಯು ಕೇಳಲು ನಮ್ಮನ್ನು ನಡಿಸಬೇಕು. ಕರ್ತನ

ಉದಾರತೆಗೆ ನಾವು ಹೇಗೆ ಪ್ರತಿಕ್ರಿಯೆ ತೋಲಿಸಬೇಕು? ಇದನ್ನು ಕಲ್ಪಿಸಿಕೊಳ್ಳಿರಿ: ಯಾರೋ ಒಬ್ಬರು ನನಗೆ ಒಂದು ಸುಂದರವಾದ ಮನೆಯನ್ನು, ಒಂದು ಹೊಸ ವಾಹನವನ್ನು ಮತ್ತು ಬ್ಯಾಂಕಿನಲ್ಲಿ ಒಂದು ದೊಡ್ಡ ಮೊತ್ತದ ಹಣವನ್ನು ಕೊಡುವರೆಂದು ತಿಳಿಯಿರಿ. ಆಗ ಒಂದು ದಿನ ಈ ಉದಾರಿಯಾದ ವ್ಯಕ್ತಿಯು ಅವನು ನನ್ನ ಮನೆಯಲ್ಲಿ ಒಂದು ರಾತ್ರಿಯನ್ನು ಕಳೆಯ ಬೇಕಾಗಿದೆ ಮತ್ತು ಮರುದಿನ ಬೆಳಿಗ್ಗೆ ತನ್ನನ್ನು ವಿಮಾನ ನಿಲ್ದಾಣಕ್ಕೆ ಕರೆದುಕೊಂಡು ಹೋಗಬೇಕು ಎಂದು ನನ್ನನ್ನು ಕೇಳಿಕೊಳ್ಳುತ್ತಾನೆ. “ಇಲ್ಲ! ನನ್ನಿಂದ ಅತೀಯಾದದ್ದನ್ನು ಕೇಳುತ್ತಿರುವಿ! ಇದು ನನ್ನ ಮತ್ತು ನನ್ನ ಹೆಂಡತಿಯ ಮೇಲೆ ಭಯಂಕರವಾದ, ಒತ್ತಡವನ್ನು ಹಾಕುತ್ತದೆ. ನನಗೆ ಸಮಯವಿರುವದಿಲ್ಲ. ಇದಲ್ಲದೇ ವಿಮಾನ ನಿಲ್ದಾಣದ ಪಾರ್ಕಿಂಗ್ ಸ್ಥಳದಲ್ಲಿ ಕಾರು ಪಾರ್ಕ್‌ಮಾಡಲಿಕ್ಕೆ ಹಲವಾರು ಡಾಲರುಗಳನ್ನು ಖರ್ಚುಮಾಡಬೇಕಾಗುತ್ತದೆ” ಎಂದು ನಾನು ಉತ್ತರ ಕೊಡುತ್ತೇನೆ! ಇಷ್ಟನ್ನೇ ಹೇಳಿದರೂ ಅಂಥ ಉತ್ತರವು ನನ್ನನ್ನು ಸಂಪೂರ್ಣವಾಗಿ ಉಪಕಾರ ನೆನಸದವನು ಎಂಬುದಾಗಿ ಕರೆಯುತ್ತದೆ. ನಮ್ಮನ್ನು ಬಹಳವಾಗಿ ಆಶೀರ್ವಾದಿಸಿದ ನಂತರವೂ ಕರ್ತನಿಗೆ ಸಕಾರಾತ್ಮಕವಾಗಿ ಪ್ರತಿಕ್ರಿಯೆ ತೋಲಿಸದಿದ್ದರೆ ನಾವು ಇನ್ನೂ ಎಷ್ಟೋ ದೊಡ್ಡ ಉಪಕಾರಗೇಡಿಗಳೆಂದು ಕರೆಯಲ್ಪಡುವೆವಲ್ಲವೆ?

**ನಮ್ಮ ಪ್ರೀತಿ**

ನಾವು ಕರ್ತನಿಗೆ ನಮ್ಮ ಪ್ರೀತಿಯನ್ನು ಕೊಡುವ ಅಗತ್ಯತೆಯಲ್ಲಿದ್ದೇವೆ. ನಮ್ಮ ಪಾಠಕ್ಕಾಗಿ ಆಧಾರ ವಚನವು ಕೀರ್ತನೆ 116ರಲ್ಲಿ ಇರುತ್ತದೆ. ಕೀರ್ತನೆಯ ಈ ಮಾತುಗಳಿಂದ ಪ್ರಾರಂಭವಾಗುತ್ತದೆ: “ಯೆಹೋವನನ್ನು ಪ್ರೀತಿಸುತ್ತೇನೆ, ಆತನು ನನ್ನ ಮೊರೆಯನ್ನು ಕೇಳುವನು; ಆತನು ನನ್ನ ವಿಜ್ಞಾಪನೆಗೆ ಕಿವಿಗೊಟ್ಟಿದ್ದಾನೆ” (ವಚನ 1). ಹೊಸ ಒಡಂಬಡಿಕೆಯು ಅದನ್ನು ಈ ರೀತಿಯಲ್ಲಿ ಇಡುತ್ತದೆ: “ದೇವರು ಮೊದಲು ನಮ್ಮನ್ನು ಪ್ರೀತಿಸಿದ್ದರಿಂದ ನಾವು ಪ್ರೀತಿಸುತ್ತೇವೆ” (1 ಯೋಹಾನ 4:19; KJV).

ಪ್ರೀತಿಯು ನಮ್ಮ ಯಾದಿಯಲ್ಲಿ ಮೊದಲು ಇರುತ್ತದೆ. ಯಾಕಂದರೆ ಪ್ರೀತಿಯು ಇತರ ನಿಶ್ಚಿತವಾದ ಉತ್ತರಗಳನ್ನು ಉತ್ಪಾದಿಸುತ್ತದೆ. ಒಬ್ಬ ಪುರುಷ ಮತ್ತು ಅವನ ಹೆಂಡತಿ ಒಬ್ಬರನ್ನೊಬ್ಬರು ಪ್ರೀತಿಸುವಾಗ, “ಮದುವೆಯ ಹೆಚ್ಚಾದ ನಿಯಮಗಳು” ತಾವೇ ಜವಾಬ್ದಾರಿಕೆ ವಹಿಸಿಕೊಳ್ಳುತ್ತವೆ. ನಾವು ನಿಜವಾಗಿ ದೇವರನ್ನು ಪ್ರೀತಿಸುವಾಗ, ನಾವು ಆತನನ್ನು ಮೆಚ್ಚಿಸಲು ಏನನ್ನಾದರಾಗಲೀ ಹಾಗೂ ಪ್ರತಿಯೊಂದನ್ನಾಗಲೀ ಮಾಡುತ್ತೇವೆ.

**ನಮ್ಮ ಕೃತಜ್ಞತಾಸ್ತುತಿ**

ದೇವರಿಗೆ ನಾವು ಕೃತಜ್ಞತಾಸ್ತುತಿಯನ್ನು ಅರ್ಪಿಸುವ ಅಗತ್ಯತೆ ಇರುತ್ತದೆ. ಕೀರ್ತನೆಗಾರನು, “ಕರ್ತನ ಮಹೋಪಕಾರಗಳಿಗೆ ಬದಲೇನು ಮಾಡಲಿ?” ಎಂದು ಕೇಳಿದ ನಂತರ (ಕೀರ್ತನೆ 116:12), ಕೆಲವು ವಚನಗಳಾದ ಮೇಲೆ, “ನಾನು ನಿನಗೆ ಕೃತಜ್ಞತಾಯಜ್ಞಗಳನ್ನು ಸಮರ್ಪಿಸುವೆನು; ಯೆಹೋವ ನಾಮವನ್ನು ಪ್ರಖ್ಯಾತಿಪಡಿಸುವೆನು” (ವಚನ 17) ಎಂದು ಉತ್ತರಕೊಟ್ಟನು. ಹೊಸ ಒಡಂಬಡಿಕೆಯಲ್ಲಿ ಪೌಲನು, “ಯಾವಾಗಲೂ ಎಲ್ಲಾ ಕಾರ್ಯಗಳಿಗೋಸ್ಕರ ನಮ್ಮ ಕರ್ತನಾದ ಯೇಸುಕ್ರಿಸ್ತನ ಹೆಸರಿನಲ್ಲಿ ತಂದೆಯಾದ ದೇವರಿಗೆ ಸ್ತೋತ್ರ ಮಾಡಿರಿ” (ಎಫೆಸ 5:20) ಎಂದು ಬರೆದನು.

ನಾವು ಬಹಳ ಸಲ ಕೃತಜ್ಞತೆ ಸಲ್ಲಿಸುವಲ್ಲಿ ಸೋತು ಹೋಗುತ್ತೇವೆ. ಎರಡನೆಯ

ಜಾಗತಿಕ ಮಹಾಯುದ್ಧದಲ್ಲಿ, ಸೇನಾಧಿಕಾರಿ ಜಾರ್ಜ್ ಪೆಟ್ಟನ್‌ನು ಅಮೇರಿಕನ್ ಥರ್ಡ್ ಆರ್ಮಿಯಿಂದ ಒಬ್ಬ ಸೈನಿಕನನ್ನು ಒಂದು ವಿಶ್ರಾಂತಿ ಕ್ಯಾಂಪಿಗೆ ಕಳುಹಿಸಿದನು. ಸೈನಿಕನು ಅವನಿಗೆ ಕೃತಜ್ಞತೆಯ ಪತ್ರವನ್ನು ಪೋಸ್ಟ್ ಮಾಡಿದನು. ಜನರಲ್ ಪೆಟ್ಟನ್‌ನು ಮೂವತ್ತೈದು ವರ್ಷಗಳವರೆಗೆ ತಾನು ಸೈನ್ಯದಲ್ಲಿದ್ದು, ಇಂದು ಕೃತಜ್ಞತೆಯ ಪತ್ರವನ್ನು ಸ್ವೀಕರಿಸಿದ್ದು ಮೊದಲನೆಯ ಸಲ ಎಂದು ಹೇಳಿದನು. ಬೆಂಜಮಿನ್ ಫ್ರಾಂಕ್‌ಲಿನ್ ಹೀಗೆ ಹೇಳಿದನು, "ಅಪ್ರಯೋಜಕವಾದ ಪ್ರತಿಯೊಂದು ಪದಕ್ಕೆ ನಾವು ಲೆಕ್ಕಾ ಕೊಡಬೇಕಾಗಿರುವಂತೆ, ಪ್ರತಿಯೊಂದು ಅಪ್ರಯೋಜಕ ಮೌನತೆಗೆ ನಾವು ಲೆಕ್ಕಾ ಕೊಡಬೇಕು."

**ನಮ್ಮ ಸಮಯ**

ನಮ್ಮ ಪ್ರೀತಿಯನ್ನು ಮತ್ತು ಕೃತಜ್ಞತಾಸ್ತುತಿಯನ್ನು ನಾವು ವ್ಯಕ್ತಪಡಿಸುವುದು ಹೇಗೆ? ನಮ್ಮ ಪಾಠವನ್ನು ಸಾಧ್ಯವಾದಷ್ಟು ವ್ಯಾವಹಾರಿಕವಾದದ್ದನ್ನಾಗಿ ಮಾಡೋಣ. ನಮ್ಮ ಸಮಯವನ್ನು ದೇವರಿಗೆ ಕೊಡುವ ಅವಶ್ಯಕತೆಯಿದೆ. "ಆದಕಾರಣ ನೀವು ನಡಕೊಳ್ಳುವ ರೀತಿಯನ್ನು ಕುರಿತು ಚೆನ್ನಾಗಿ ನೋಡಿಕೊಳ್ಳಿರಿ. ಜ್ಞಾನವಿಲ್ಲದವರಾಗಿರದೆ ಜ್ಞಾನವಂತರಾಗಿರ್ರಿ. ಈ ದಿನಗಳು ಕೆಟ್ಟವುಗಳಾಗಿವೆ; ಆದದರಿಂದ *ಕಾಲವನ್ನು ಸುಮ್ಮನೆ ಕಳಕೊಳ್ಳದೇ ಅದನ್ನು* ಬೆಲೆಯುಳ್ಳದ್ದೆಂದು ಉಪಯೋಗಿಸಿಕೊಳ್ಳಿರಿ" (ಎಫೆಸ 5:15, 16; ಒತ್ತಿ ಹೇಳಿದ್ದು ನನ್ನದು) ಎಂದು ಪೌಲನು ಕರೆ ನೀಡಿದನು. "ನನ್ನ ಜೀವವು ಎಷ್ಟು ಕೆಲಸದಿಂದ ತುಂಬಿಕೊಂಡಿವೆ ಎಂಬುದನ್ನು ನೀವು ತಿಳಿಯಲಾರಿರಿ. ಕರ್ತನಿಗಾಗಿ ಕೊಡಲು ನನಗೆ ಎಷ್ಟೂ ಸಮಯವಿಲ್ಲ" ಎಂದು ಒಬ್ಬನು ವಿರೋಧಿಸಬಹುದು. ಒಂದು ವೇಳೆ ಒಬ್ಬ ವೈದ್ಯನು ನಿಮಗೆ ಪ್ರತೀ ದಿನ ಒಂದು ತಾಸು ಹೆಚ್ಚು ಸಮಯ ಹಾಸಿಗೆಯಲ್ಲಿ ವಿಶ್ರಾಂತಿ ತೆಗೆದು ಕೊಳ್ಳಬೇಕು ಇಲ್ಲದಿದ್ದರೆ ನೀನು ಸಾಯುವಿ ಎಂದು ಹೇಳುವನೆಂದು ತಿಳಿಯಿರಿ. ಪ್ರತಿದಿನ ಮೂವತ್ತು ನಿಮಿಷಗಳ ವರೆಗೆ ಓದುವದರಿಂದ ನಿನ್ನ ಕಣ್ಣುಗಳಿಗೆ ವ್ಯಾಯಾಮಮಾಡಿಸು ಇಲ್ಲದಿದ್ದರೆ ನೀನು ಕುರುಡನಾಗುವಿ ಎಂಬದು ವೈದ್ಯರು ಹೇಳ ಬಹುದು. ನಿಮ್ಮ ಮಗುವಿಗೆ ಪ್ರತಿದಿನ ಒಂದು ತಾಸು ಅವನ ಅಭ್ಯಾಸದಲ್ಲಿ ಸಹಾಯ ಮಾಡು ಇಲ್ಲದಿದ್ದರೆ ಅವನು ಪರೀಕ್ಷೆಯಲ್ಲಿ ತೇರ್ಗಡೆ ಹೊಂದುವದಿಲ್ಲ ಎಂದು ಒಬ್ಬ ಶಿಕ್ಷಕನು ಹೇಳಬಹುದು. ನಿನಗೆ ಸಮಯ ದೊರೆಯುವುದೋ? ನೀನು ಸಮಯ *ಮಾಡಿ*ಕೊಳ್ಳಬಹುದೋ? ಯಜಮಾನನಿಗಾಗಿ ಸಮಯ ಕಂಡುಕೊಳ್ಳೋಣ ಇಲ್ಲವೇ ಸಮಯ ಮಾಡಿಕೊಳ್ಳೋಣ.

**ನಮ್ಮ ಸಾಮರ್ಥ್ಯಗಳು**

ದೇವರು ನಮಗೆ ಕೊಟ್ಟ ಸಾಮರ್ಥ್ಯಗಳನ್ನು ಆತನಿಗೆ ಕೊಡೋಣ. ಮತ್ತಾಯ 25:14-30ರಲ್ಲಿಯ ತಲಾಂತುಗಳ ಸಾಮ್ಯವು ನಮ್ಮೆಲ್ಲರಿಗೂ ದೇವರಿಂದ ಕೊಡಲ್ಪಟ್ಟ ಸಾಮರ್ಥ್ಯಗಳಿರುವವು, ಮತ್ತು ಅವುಗಳನ್ನು ನಾವು ಆತನ ಮಹಿಮೆಗಾಗಿ ಉಪಯೋಗಿಸಬೇಕೆಂದು ಬೋಧಿಸುತ್ತದೆ. ಆ ಸಾಮ್ಯದಲ್ಲಿ, ಒಂದು ತಲಾಂತು ಹೊಂದಿದವನು ತನ್ನ ತಲಾಂತನ್ನು ಹುಗಿದಿಟ್ಟನು. ನಮ್ಮ ಸಾಮರ್ಥ್ಯಗಳನ್ನ ಸ್ವಾರ್ಥತೆ, ತಿರಸ್ಕಾರ, ಉಗುರು ಬೆಚ್ಚಗಿನ ಸ್ಥಿತಿ, ಪ್ರಾಪಂಚಿಕತ್ವ ಇಲ್ಲವೇ ಭಕ್ತಿಹೀನತೆಯಲ್ಲಿ ಹೂಣಿಡುವ ಅಪರಾಧವುಳ್ಳವರು ನಾವಾಗಿರದವರಾಗಿರೋಣ.

**ನಮ್ಮ ಹಣ**

ನಮ್ಮ ಭೌತಿಕ ಸ್ವಾಸ್ಥ್ಯಗಳನ್ನು ನಾವು ಆತನಿಗೆ ಕೊಡತಕ್ಕದ್ದು. ಅಪೊಸ್ತಲರ

ಕೃತ್ಯಗಳು 2ರಲ್ಲಿ ಆದಿ ಕ್ರೈಸ್ತರು ಸುಖದಿಂದಿರುವವರಂತೆ ವಿವರಿಸಲ್ಪಟ್ಟಿದ್ದಾರೆ: "ಸರಳ ಹೃದಯದಿಂದ ಊಟ ಮಾಡುತ್ತಾ ಇದ್ದರು ..." (ವಚನ 46ಬಿ). ತಮ್ಮ ಆಶೀರ್ವಾದಗಳನ್ನು ಗುರುತಿಸಿ, "ಅವರವರ ಅಗತ್ಯವಿದ್ದ ಹಾಗೆ" (ವಚನ 45) ತಮ್ಮ ಸ್ವಾಸ್ಥ್ಯಗಳನ್ನು ಕೊಟ್ಟು ಬಿಡುವದರಲ್ಲಿ ಹಿಂಜರಿಯಲಿಲ್ಲ. 2 ಕೊರಿಂಥ 8ರ ಪ್ರಕಾರ, ಮಕೆದೋನ್ಯದಲ್ಲಿದ್ದ ಕ್ರೈಸ್ತರು "ವಿಪುಲವಾದ ಆನಂದದಲ್ಲಿದ್ದರು" ಮತ್ತು "ತಮ್ಮ ಉದಾರತೆಯಲ್ಲಿ ಐಶ್ವರ್ಯವುಳ್ಳವರಾಗಿದ್ದರು" (ವಚನ 2). ದೇವರ ಕಾರ್ಯಗಳನ್ನು ವಿಸ್ತರಿಸಲು ಭೌತಿಕ ಆಶೀರ್ವಾದಗಳನ್ನು ಉಪಯೋಗಿಸಲು ಪ್ರೇರೇಪಿಸದಿದ್ದರೆ ನಮ್ಮ ಪ್ರೀತಿಯು ಅಲ್ಪವಾದದ್ದಾಗುತ್ತದೆ.

**ನಮ್ಮ ಎಲ್ಲವೂ**

ಇನ್ನೂ ಹೆಚ್ಚಾದದ್ದನ್ನು ಹೇಳಬಹುದು. ನಾವು ನಮ್ಮ "ಎಲ್ಲವನ್ನೂ" ಕರ್ತನಿಗೆ ಕೊಡತಕ್ಕದ್ದು ಎಂದು ಹೇಳುವದರಿಂದ ನಾವು ಕೊಡಬೇಕಾದ ಉತ್ತರವನ್ನು ಸಂಕ್ಷೇಪಿಸುತ್ತೇನೆ (ನೋಡಿರಿ ಮತ್ತಾಯ 22:37). ಕೊನೆಯದಾಗಿ ಒಂದು ಸಲ ನಮ್ಮ ವಾಕ್ಯ ಭಾಗಕ್ಕೆ ಹಿಂದಿರುಗೋಣ. "ಕರ್ತನಿಗೆ ನಾನೇನು ಕೊಡಲಿ?" ಎಂದು ಕೇಳಿದ ನಂತರ, ಬರಹಗಾರನು, "ಯೆಹೋವನಿಗೆ ಹೊತ್ತ ಹರಕೆಗಳನ್ನು ಆತನ ಎಲ್ಲಾ ಜನರ ಮುಂದೆಯೇ ಸಲ್ಲಿಸುವೆನು" ಎಂದು ಹೇಳಿದನು (ಕೀರ್ತನೆ 116:14ಎ; ವಚನ 18ಎ ಸಹ ನೋಡಿರಿ). "ಕರ್ತನಿಗೆ ನಾನು ವಾಗ್ದಾನ ಮಾಡಿದ ಪ್ರತಿಯೊಂದನ್ನು ನಾನು ಮಾಡುವೆನು" ಅವನು ಹೇಳುತ್ತಿರುವನು ಎಂದು ಬೇರೆ ಮಾತಿನಲ್ಲಿ ಹೇಳಬಹುದು.

ನೀನು ಮತ್ತು ನಾನು ಕ್ರೈಸ್ತರಾದಾಗ, ಯೇಸುವನ್ನು ಕರ್ತನೆಂದು ಅರಿಕೆ ಮಾಡಿದೆವು (ಅಪೊಸ್ತಲರ ಕೃತ್ಯಗಳು 8:36-38; ರೋಮಾಪುರ 10:9, 10). ಆ ಅರಿಕೆಯಲ್ಲಿ ಮತ್ತು ಅದನ್ನು ಹಿಂಬಾಲಿಸಿದ ಬಾಪ್ತಿಸ್ಮದಲ್ಲಿ, ಕರ್ತನಿಗೆ ನಮ್ಮ ಜೀವಿತಗಳನ್ನು ಸಮರ್ಪಿಸಿದೆವು. ಪರಿಣಾಮದಲ್ಲಿ, ನಾವು ಆತನ ಚಿತ್ತವನ್ನು ಮಾಡಲು ಪ್ರಮಾಣಮಾಡಿದೆವು.

## ಮುಕ್ತಾಯ

Frances E. Havergal wrote,

Take my life, and let it be
Consecrated, Lord, to Thee;
..........................
Take my love; my Lord, I pour
At Thy feet its treasure-store;
Take myself, and I shall be
Ever, only, all for Thee.[4]

ನಮಗಾಗಿ ದೇವರ ಉಪಕಾರಗಳು ಅತ್ಯುತ್ತಮವಾದವುಗಳಾಗಿವೆ. ಈಗ ನಮ್ಮ ಅತ್ಯುತ್ತಮವಾದವುಗಳನ್ನು ಆತನಿಗೆ ಕೊಡೋಣ![5]

ಟಿಪ್ಪಣಿಗಳು

[1]ನೋಹನ ದಿನದಲ್ಲಿ ನಾವೆಯಲ್ಲಿದ್ದವರು ಪ್ರಳಯದಿಂದ ಉಳಿದುಕೊಂಡರು; ನಾವೆಯ ಹೊರಗೆ ಇದ್ದವರು ಉಳಿಯಲಿಲ್ಲ. [2]ವಾಗ್ದತ್ತ ದೇಶದಲ್ಲಿ ದೇವರು ಆಶ್ರಯ ನಗರುಗಳನ್ನು, ಜನರು ಉಳಿದು ಕೊಳ್ಳುವುದಕ್ಕಾಗಿ ಓಡಿ ಹೋಗಬಹುದಾದ ನಗರುಗಳನ್ನು ಒದಗಿಸಿದ್ದನು (ಅರಣ್ಯಕಾಂಡ 35). [3]ಕರ್ತನ ಜೀವನದ ಅವಶ್ಯಕತೆಗಳನ್ನು ಒದಗಿಸುವದನ್ನು ಕುರಿತು ಧರ್ಮೋಪದೇಶ ಕಾಂಡ 8:18 ಮತ್ತು ಕೀರ್ತನೆ 37:25ನ್ನು ಸಹ ನೋಡಿರಿ. [4]Frances R. Havergal, "Take My Life, and Let It Be," Songs of Faith and Praise, comp. and ed. Alton H. Howard (West Monroe, La.: Howard Publishing Co., 1996). [5]In preparing this lesson, I borrowed heavily from Wendell Winkler, "What Shall I Render Unto the Lord for All His Benefits Toward Me?" Giving With a Purpose, a Promise, and a Performance (Fort Worth, Tex.: Winkler Publications, 1966), 165-89.

© 2009 Truth for Today